## ಮೋಡಿ ಮಾಡುವ ಮಿಥುನ್

ಇನ್ಫೋಸಿಸ್‌ನಲ್ಲಿ ಕೆಲಸ ಮಾಡುತ್ತಿರುವ ಮಿಥುನ್ ಪೈ ಉತ್ತಮ ಛಾಯಾಗ್ರಾಹಕ. ಜೊತೆಗೆ ನೃತ್ಯ ಪಟು. ತನ್ನ ಛಾಯಾಗ್ರಹಣ ಕೌಶಲದಿಂದಲೇ ಎಲ್ಲರನ್ನೂ ಮೋಡಿ ಮಾಡುವ ಮಿಥುನ್ ಮೈಸೂರಿನ ಮಹಾಜನ ಕಾಲೇಜಿನಲ್ಲಿ ಬಿ.ಕಾಂ. ಪದವಿ ಪಡೆದುಕೊಂಡಿದ್ದಾರೆ. ಕ್ಯಾಂಪಸ್ ಸಂದರ್ಶನದಲ್ಲಿ ಇನ್ಫೋಸಿಸ್‌ಗೆ ಆಯ್ಕೆಯಾಗಿರುವ ಅವರು ತಮ್ಮ ಬಿಡುವಿನ ವೇಳೆಯಲ್ಲಿ ನೃತ್ಯ ಮತ್ತು ಛಾಯಾಗ್ರಹಣವನ್ನು ಮುಂದುವರಿಸಿದ್ದಾರೆ. ಚಿಕ್ಕಂದಿನಿಂದಲೂ ಅವರಿಗೆ ನೃತ್ಯದಲ್ಲಿ ಆಸಕ್ತಿ. ಅದಕ್ಕೆ ಅವರ ಪೋಷಕರು ನೀರೆರೆದಿದ್ದಾರೆ. ಉತ್ತಮ ಕ್ಯಾಮೆರಾ ಹೊಂದಿರುವ ಮಿಥುನ್, ವ್ಯಕ್ತಿಚಿತ್ರಗಳನ್ನು ತೆಗೆಯುವುದರಲ್ಲಿ ಎತ್ತಿದ ಕೈ. ಪ್ರಕೃತಿ ಚಿತ್ರಗಳನ್ನೂ ತೆಗೆಯುತ್ತಾರೆ. ಛಾಯಾಗ್ರಹಣವನ್ನು ಅವರು ಯಾರಿಂದಲೂ ಕಲಿತಿಲ್ಲ. ಸ್ವಂತ ಆಸಕ್ತಿಯಿಂದಲೇ ಕೌಶಲವನ್ನು ಬೆಳೆಸಿಕೊಂಡಿದ್ದಾರೆ.





ಮಿಥುನ್ ಪೈ ಅವರ ಛಾಯಾಗ್ರಹಣದ ಒಂದು ಝಲಕ್

ಮಾತನ್ನು ಒಪ್ಪುತ್ತಾರೆ. ತಮ್ಮ ಮಗಳಿಗೆ ಕಿವಿ ಕೇಳಿಸುವುದಿಲ್ಲ ಎಂದು ಗೊತ್ತಾದಾಗ ಅವರು ಹೆದರಲಿಲ್ಲ. ಭಾವನಾತ್ಮಕವಾಗಿ ಕುಗ್ಗಿಯೂ ಹೋಗಲಿಲ್ಲ. ಅವಳ ಎಲ್ಲ ಬೇಕು ಬೇಡಗಳನ್ನು ಪೂರೈಸಿದರು. ಈಗ ಆಕೆ ಅತ್ಯುತ್ತಮ ಗ್ರಾಫಿಕ್ ಡಿಸೈನರ್. ಬಹುರಾಷ್ಟ್ರೀಯ ಕಂಪನಿಯಲ್ಲಿ ಕೆಲಸ ಮಾಡುತ್ತಾಳೆ. ಶ್ರವಣ ದೋಷವುಳ್ಳ ಅಥವಾ ದೃಷ್ಟಿ ದೋಷವುಳ್ಳ ಮಕ್ಕಳು ಕೆಲಸಕ್ಕೆ ಸೇರಿದ ನಂತರವೂ ಶ್ರದ್ಧೆಯಿಂದ ಕೆಲಸ ಮಾಡುತ್ತಾರೆ. ಆದರೆ ಈಗಲೂ ನಮ್ಮ ಸಮಾಜ ದಿವ್ಯಾಂಗರ ಬಗ್ಗೆ ನಂಬಿಕೆಯನ್ನು ಬೆಳೆಸಿಕೊಂಡಿಲ್ಲ. ಜನರು ಅವರನ್ನು ಅನುಮಾನದಿಂದಲೇ ನೋಡುತ್ತಾರೆ. ಅವರು ಕೆಲಸ ಮಾಡಬಲ್ಲರು ಎನ್ನುವುದು ಇನ್ನೂ ಅವರಿಗೆ ಗ್ಯಾರಂಟಿಯಾಗಿಲ್ಲ. ನೌಕರಿ ಮಾಡುವ ಸ್ಥಳಗಳಲ್ಲಿ ಸಮಾಧಾನಕರ ವಾತಾವರಣ ಇದೆ ನಿಜ. ಆದರೆ ಕೇವಲ ಸುಲಭದ ಕೆಲಸವನ್ನು ಅವರಿಗೆ ಕೊಟ್ಟು ಹೆಚ್ಚು ಶ್ರಮದಾಯಕ ಕೆಲಸ ನೀಡಲು ಹಿಂಜರಿಯುತ್ತಾರೆ. ಇದರಿಂದ ದಿವ್ಯಾಂಗರಿಗೆ ಅವರ ಸಾಮರ್ಥ್ಯದ ಬಗೆಗಿನ ನಂಬಿಕೆ ಹೊರಟು ಹೋಗುವ ಸಾಧ್ಯತೆ ಇದೆ ಎಂದು ಅವರು ಹೇಳುತ್ತಾರೆ. ‘ದಿವ್ಯಾಂಗರ ಬಗ್ಗೆ ಸಮಾಜ ಇನ್ನಷ್ಟು ಪ್ರಾಯೋಗಿಕವಾಗಿ ಆಲೋಚಿಸಬೇಕಿದೆ. ಅವರನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ಬಗ್ಗೆಯೂ ಆಲೋಚಿಸಬೇಕಿದೆ’ ಎಂದು ಅವರು ಹೇಳುತ್ತಾರೆ.

### ಮೂಢನಂಬಿಕೆ ಬಿಡಿ, ನಿಮ್ಮಲ್ಲಿ ನಂಬಿಕೆಯಿಡಿ

ಅಂಗವಿಕಲರು ಅತ್ಯುತ್ತಮವಾಗಿ ಕೆಲಸ ಮಾಡುತ್ತಾರೆ, ತಮ್ಮ ಸಾಮರ್ಥ್ಯಕ್ಕೆ ಮೀರಿದ ಕೆಲಸ ಮಾಡುತ್ತಿದ್ದರೂ ಅವರು ಕೀಳರಿಮೆಯಿಂದ

### ಶ್ರವಣ ದೋಷ ಉಳ್ಳವರಿಗೆ ಇಲ್ಲಿ ಸಲಹೆ ಲಭ್ಯ

- ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ, ಮೈಸೂರು. 0821–2502000, 0821–2502100
- ಕಿವುಡು ಮಕ್ಕಳ ಮತ್ತು ತಾಯಂದಿರ ಶಾಲೆ, ಮೈಸೂರು. 0821–254492
- ಚಂದ್ರಶೇಖರ ವಾಕ್ ಶ್ರವಣ ಸಂಸ್ಥೆ, ಬೆಂಗಳೂರು. ರತ್ನಾ ಶೆಟ್ಟಿ 9480344297
- ಎಸ್‌ಜೆ.ಎಸ್. ವಾಗ್ದೇವಿ ಸಂಸ್ಥೆ.ಡಾ.ಶಾಂತಾ ರಾಧಾಕೃಷ್ಣ 9886349253